2628/83 16 x 3

KSIIDC

# ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

''ಖನಿಜ ಭವನ'', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001.
ದೂರವಾಣಿ:080-22258131-32-33, ಫ್ಯಾಕ್ಸ್:080-22255740, ಇ-ಮೇಲ್:**info@ksiidc.com**
ವೆಬ್‌ಸೈಟ್:**www.ksiidc.com**

## ನೇಮಕಾತಿ ಪ್ರಕಟಣೆ (2ನೇ ಕರೆ)

(ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲು)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ) ಒಂದು ಪ್ರಮುಖ ರಾಜ್ಯಮಟ್ಟದ ಹಣಕಾಸು ಸಂಸ್ಥೆಯಾಗಿದ್ದು ಪ್ರಸ್ತುತ ಕರ್ನಾಟಕದಲ್ಲಿ ಭಾರಿ ಮೂಲಸೌಲಭ್ಯ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕೆಳಗೆ ತಿಳಿಸಿರುವ ಹುದ್ದೆಗಳಿಗಾಗಿ ಅರ್ಹ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಪುನಃ ಆಹ್ವಾನಿಸಲಾಗಿದೆ.

**ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)-1 ಹುದ್ದೆ**

**ಸಹಾಯಕ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)-1 ಹುದ್ದೆ**

**ಮೇಲ್ಕಂಡ ಹುದ್ದೆಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲು.** ಸರ್ಕಾರಿ ಅಧಿಸೂಚನೆ ಸಂ.ಡಿಪಿಎಆರ್ 06 ಪಿಎಲ್ಎಕ್ಸ್ 2012 ಬೆಂಗಳೂರು, ದಿನಾಂಕ 06.11.2013 ರಲ್ಲಿ ನಿರ್ದಿಷ್ಟ ಪಡಿಸಿದಂತೆ ಅಭ್ಯರ್ಥಿಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಯಾಗಿರಬೇಕು.

| **(1) ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)-1 ಹುದ್ದೆ** | |
|---|---|
| ವಿದ್ಯಾರ್ಹತೆ ಮತ್ತು ಅನುಭವ | ಅಂಗೀಕೃತ ವಿಶ್ವವಿದ್ಯಾಲಯದಿಂದ/ ವಿದ್ಯಾಸಂಸ್ಥೆಯಿಂದ ಸಿವಿಲ್ ಇಂಜಿನೀಯರಿಂಗ್ ಪದವಿಯ ಜೊತೆಗೆ ಎಂಇ/ಎಂಟೆಕ್ (ಸಿವಿಲ್) ಪದವಿ ಹೊಂದಿರಬೇಕು. ಮೂಲ ಸೌಲಭ್ಯ ಯೋಜನೆಗಳಲ್ಲಿ ಮತ್ತು ಯೋಜನಾ ನಿರ್ವಹಣೆ/ಪಿಪಿಪಿ ಮಾದರಿ ವಿಷಯಗಳಲ್ಲಿ 16 ವರ್ಷಗಳಿಗಿಂತ ಕಡಿಮೆ ಇಲ್ಲದ ಅನುಭವ ಇರಬೇಕು. ವಿಮಾನಯಾನ/ವಿಮಾನ ನಿಲ್ದಾಣ ಅಭಿವೃದ್ಧಿ ವಿಷಯದಲ್ಲಿ ಅನುಭವವಿದ್ದರೆ ಅಪೇಕ್ಷಣೀಯ/ಆದ್ಯತೆ ನೀಡಲಾಗುವುದು. |
| ವಯಸ್ಸು | ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು 43 ವರ್ಷ ಮೀರಿರಬಾರದು. |
| ವೇತನ ಶ್ರೇಣಿ | ರೂ.90500-2200-97100-2500-112100-2800-123300-(2018ರ ಪರಿಷ್ಕೃತ ವೇತನ ಶ್ರೇಣಿ) |
| **(2) ಸಹಾಯಕ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)-1 ಹುದ್ದೆ** | |
| ವಿದ್ಯಾರ್ಹತೆ ಮತ್ತು ಅನುಭವ | ಅಂಗೀಕೃತ ವಿಶ್ವವಿದ್ಯಾಲಯದಿಂದ/ ವಿದ್ಯಾಸಂಸ್ಥೆಯಿಂದ ಸಿವಿಲ್ ಇಂಜಿನೀಯರಿಂಗ್ ಪದವಿಯ ಜೊತೆಗೆ ಎಂಇ/ಎಂಟೆಕ್ (ಸಿವಿಲ್) ಪದವಿ ಹೊಂದಿರಬೇಕು. ಮೂಲ ಸೌಲಭ್ಯ ಯೋಜನೆಗಳಲ್ಲಿ ಮತ್ತು ಯೋಜನಾ ನಿರ್ವಹಣೆ/ಪಿಪಿಪಿ ಮಾದರಿ 12 ವರ್ಷಗಳಿಗಿಂತ ಕಡಿಮೆ ಇಲ್ಲದ ಅನುಭವ ಇರಬೇಕು. ವಿಮಾನಯಾನ/ವಿಮಾನ ನಿಲ್ದಾಣ ಅಭಿವೃದ್ಧಿ ವಿಷಯದಲ್ಲಿ ಅನುಭವವಿದ್ದರೆ ಅಪೇಕ್ಷಣೀಯ/ಆದ್ಯತೆ ನೀಡಲಾಗುವುದು. |
| ವಯಸ್ಸು | ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು 39 ವರ್ಷ ಮೀರಿರಬಾರದು. |
| ವೇತನಶ್ರೇಣಿ | ರೂ.82000-1900-83900-2200-97100-2500-112100-2800-117700 (2018ರ ಪರಿಷ್ಕೃತ ವೇತನ ಶ್ರೇಣಿ) |

ಮೂಲ ವೇತನದ ಜೊತೆಗೆ ಜಾರಿಯಲ್ಲಿರುವ ನಿಗಮದ ನಿಬಂಧನೆಗಳ ಪ್ರಕಾರ ಹುದ್ದೆಗೆ ಅನ್ವಯಿಸುವ ಭತ್ಯೆಗಳಾದ ಡಿಎ, ಹೆಚ್ಆರ್ಎ, ಸಿಸಿಎ ಮತ್ತು ಪಿಎಫ್/ಗ್ರಾಚುಯಿಟಿ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಜಿಎಸ್ಎಲ್ಐ, ಮನೆ/ವಾಹನ/ ಕಂಪ್ಯೂಟರ್‌ಗಳಿಗೆ ಮುಂಗಡ ಹಣ ಇತ್ಯಾದಿಗಳನ್ನು ನಿಗಮದ ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ನೀಡಲಾಗುವುದು.

**ಆಯ್ಕೆ ವಿಧಾನ:** ವಿದ್ಯಾರ್ಹತೆ, ಅನುಭವ ಮತ್ತು ಸಂದರ್ಶನದ ಮೇರೆಗೆ ಇರುತ್ತದೆ.

ಅರ್ಜಿಯನ್ನು ನಿಗಮದ ವೆಬ್‌ಸೈಟ್:**www.ksiidc.com** ನಲ್ಲಿ ಪ್ರಕಟಿಸಲಾಗಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ಪ್ರಮಾಣ ಪತ್ರಗಳ ಪ್ರತಿಗಳನ್ನು ಲಗತ್ತಿಸಿ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ, ಇವರಿಗೆ ಮೇಲ್ಕಂಡ ವಿಳಾಸಕ್ಕೆ **ದಿನಾಂಕ: 30.04.2020ರೊಳಗೆ** ತಲುಪಿಸತಕ್ಕದ್ದು. ನೇಮಕಾತಿಯ ಸಾಮಾನ್ಯ ಷರತ್ತುಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ನಿಗಮವು ಅಪೂರ್ಣವಾದ ಮತ್ತು ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

**ವಾಸಾಇ/ಬೆಂ.ನ/2821/ಎಂಸಿಎ/2019-20** **ಸಹಿ/-ವ್ಯವಸ್ಥಾಪಕ ನಿರ್ದೇಶಕರು**

| Account Executive | Studio Manager | Copy | Computer | Job No. |
|---|---|---|---|---|
| | | | | Proof Final |